ಒಂದೇ ತೆರನಂತೆ, ಆದರೆ ಬುದ್ಧಿ ಒಂದಿಲ್ಲ... ಬುದ್ಧಿ ಒಂದಿಲ್ಲ... ಪರರಿಗೆ ಹೊಂದಲ್ಲ... ಈ ಬುರುಡೆ ತರಲೆ ಮಾಡ್ತೈತೆ... ಆ...ಆ... ಬುರುಡೆ ಹಾಡು ಹೇಳ್ತೈತೆ..." ಎಂದು 'ರಾಮಾಚಾರಿ' ಸಿನಿಮಾಕ್ಕೆ ನಮ್ಮ ಸಿನಿಕವಿ–ಸಂಗೀತಗಾರ ಹಂಸಲೇಖಾ ಮಾಡಿದ ಹಾಡು ನೆನಪಾಗಿ ಬೋಳಾಗಿದ್ದ ನನ್ನ ತಲೆಬುರುಡೆ ಮೇಲೆ ಕೈಯಾಡಿಸುತ್ತ ನನ್ನಷ್ಟಕ್ಕೆ ನಾನೇ ಮುಗುಳ್ನಗುತ್ತೇನೆ. ತಲೆಬುರುಡೆಯ ಮೇಲೆ ತಕ್ಕಮಟ್ಟಿನ ಕೂದಲು ಇದ್ದರೇನೇ ಚಂದ. ಕೂದಲು ಬೆಳ್ಳಗಾಗತೊಡಗಿದರೆ ಅಂದ ಚಂದದ ರೇಸಿನಲ್ಲಿ ಹಿಂದುಳಿಯಲಾರಂಭಿಸಿದೆವು ಎಂದೇ ಅರ್ಥ! ತಲೆಬುರುಡೆಯ ಪಾಲನೆ ಪೋಷಣೆ ಅಗತ್ಯವಾಗಿರುವಂತೆ ಅದಕ್ಕೆ ಯಾವುದೇ ರೀತಿಯ ಪೆಟ್ಟು ತಗುಲದಂತೆ ಎಚ್ಚರವಹಿಸುವುದೂ ಅಷ್ಟೇ ಮುಖ್ಯ. ತಲೆಯ ಮೇಲೆ ಕೂದಲು ಇಲ್ಲದವರನ್ನು ಬೋಳು ತಲೆಯವನು, ಮಂಡೆ ಬೋಳಾದವನು ಎಂದು ಅಪಹಾಸ್ಯ ಮಾಡಿ ಕರೆಯುವುದುಂಟು. ಎರಡು ತಿಂಗಳಿಗೊಮ್ಮೆ ಕಟಿಂಗ್ ಮಾಡಿಸಲು ಹೋದಾಗ ನನ್ನ ಕಿರಿಯ ಮಿತ್ರ ಚಿದಾನಂದ ಹುನ್ನೂರನ ಮಾತು ಈ ಸಂದರ್ಭದಲ್ಲಿ ನೆನಪಾಗುತ್ತದೆ. ನನ್ನ ತಲೆಯ ಪಕ್ಕ ಮಾತ್ರ ಇದ್ದ ಕೂದಲನ್ನು ನೇವರಿಸಿ ಸ್ಪ್ರಿಂಕ್ಲರ್‌ನಿಂದ ನೀರು ಸಿಂಪಡಿಸುತ್ತಲೇ, "ಏನ್ರೀ ಸರ್, ತಲಿಮ್ಯಾಲಿನ ಕೂದಲು ಎಲ್ಲಾ ಹೋಗ್ಯಾವಲ್ರಿ?! ಬರೀ ಬುರುಡೆನೇ ಕಾಣಿಸ್ತಾದಲ್ಲ. ಚಪಾತಿ ಕಂಡಾಂಗ ಕಾಣತ್ತೈತಿ, ಕನ್ನಡ್ಯಾಗ ಒಂದಿಷ್ಟು ನೋಡ್ಕೋರಿ" ಎಂದು ಹೇಳಿದಾಗ ನಾನು ಮುಗುಳ್ನಗುತ್ತಲೇ, "ಇರ್ಲಿ ಬಿಡೊ ಮಾರಾಯ, ನನ್ನ ಬುರುಡೆ ಚಿಂತಿ ಮಾಡಿ ನಿನ್ನ ಬುರುಡಿ ಯಾಕ್ ಗರಮ್ ಮಾಡ್ಕೋತಿ? ಯಾವುದು ಎಲ್ಲಿವರೆಗೆ ಇರ್ಬೇಕೊ ಅಲ್ಲಿತನಕಾ ಇರ್ತಾವ. ಒಂದಿನಾ ಶರೀರಾನ ಹೊಂಟ ಹೋಗುವಾಗ ಯಃಕಶ್ಚಿತ ಈ ಕೂದಲಿಗ್ಯಾಕ ಚಿಂತಿ ಮಾಡೋದು?" ನನ್ನ ವೇದಾಂತದ ಮಾತು ಅವನಿಗೆ ರುಚಿಸುವುದಿಲ್ಲ. "ಹಾಂಗಲ್ರೀ ಸರ್, ಈಗ ಉದುರಿದ ಕೂದಲು ಮತ್ತೆ ಬರೂವಂಗ ಶಾಂಪೂ, ಔಷಧಿ ಬಂದಾವು. ಅಂವು ಉಪಯೋಗಿಸಿ ನೋಡ್ರಿ, ಇಲ್ಲಾಂದ್ರ

